## ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003

**KARNATAKA SECONDARY EDUCATION EXAMINATION BOARD, MALLESWARAM, BANGALORE - 560 003**

## ಎಸ್.ಎಸ್.ಎಲ್.ಸಿ ಮುಖ್ಯ ಪರೀಕ್ಷೆ – 2021

## S.S.L.C MAIN EXAMINATION – 2021

## ಪತ್ರಿಕೆ / Paper – 02

**ವಿಷಯ : ಪ್ರಥಮ ಭಾಷೆ + ದ್ವಿತೀಯ ಭಾಷೆ + ತೃತೀಯ ಭಾಷೆ / ಎನ್.ಎಸ್.ಕ್ಯೂ.ಎಫ್**

**Subjects : First Language + Second Language + Third Language / NSQF**

**(CCERF/CCERR/CCEPF/CCEPR/NSR/NSPR)**

**Key Answers**

**ಉತ್ತರಗಳ ಸಂಕೇತ**

**ಸಂಕೇತ ಸಂಖ್ಯೆ : 62-K** | **Code No. : 62-K**

**ಒಟ್ಟು ಪ್ರಶ್ನೆಗಳ ಸಂಖ್ಯೆ : 40+40+40=120]** | **[Total No. of Questions : 40+40+40=120**

## ತೃತೀಯ ಭಾಷೆ ಕನ್ನಡ

**ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ/ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ನಿಮಗೆ ನೀಡಿರುವ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್ನಿನಿಂದ ಶೇಡ್ ಮಾಡಿರಿ.** **[40×1=40]**

**81) ಭಾರತದಲ್ಲಿ ಅಲೆಮಾರಿಗಳು ತಂಗಲು ಇರುವ ಸ್ಥಳಗಳಲ್ಲೊಂದು**

A) ಮನೆ　　B) ಧರ್ಮಶಾಲೆ

C) ಕಛೇರಿ　　D) ಶಾಲೆ

**ಉತ್ತರ :** (B) ಧರ್ಮಶಾಲೆ

**82) ಅಮೆರಿಕಾದ ಪೊಲೀಸನವನು ಗೊರೂರರಲ್ಲಿ ಭಾರತದ ಪೊಲೀಸರ ಈ ವಿಷಯವನ್ನು ಕೇಳಿದನು**

A) ಸಂಬಳ, ಸಾರಿಗೆ　　B) ಕಂದಾಯ ವಸೂಲಿ

C) ಊಟ–ಉಪಚಾರ　　D) ಮನೆ ಬಾಡಿಗೆ

**ಉತ್ತರ :** (A) ಸಂಬಳ, ಸಾರಿಗೆ

**83) ಮ.ನ. ಮುಕ್ತಾಯಿ ಅವರ ಜನ್ಮಸ್ಥಳ**

A) ಧಾರವಾಡದ ಸಾಧನಕೇರಿ

B) ಶಿವಮೊಗ್ಗದ ಅರತೊಳಲು ಗ್ರಾಮ

C) ಹಾಸನದ ಗೊರೂರು

D) ಧಾರವಾಡದ ನವಲಗುಂದ

**ಉತ್ತರ :** (B) ಶಿವಮೊಗ್ಗದ ಅರತೊಳಲು ಗ್ರಾಮ

**84) ಗಾಂಧೀಜಿಯವರು ಅವಾಕ್ಕಾಗಲು ಕಾರಣ**

A) ಗೌರಮ್ಮ ಉಪವಾಸ ಸತ್ಯಾಗ್ರಹ ಮಾಡಿದ್ದರಿಂದ

B) ಗೌರಮ್ಮ ಗಾಂಧೀಜಿಯವರನ್ನು ತಮ್ಮ ಮನೆಗೆ ಬರಬೇಕೆಂದು ಒತ್ತಾಯ ಮಾಡಿರುವುದರಿಂದ

C) ಗೌರಮ್ಮ ಈಜು ಮತ್ತು ಟೆನಿಸ್ ಆಟವನ್ನು ಆಡುತ್ತಿರುವುದರಿಂದ

D) ಗೌರಮ್ಮ ಸ್ವಾತಂತ್ರ್ಯ ಮತ್ತು ಹರಿಜನೋದ್ಧಾರ ನಿಧಿಗೆ ಮಂಗಳ ಸೂತ್ರ, ಓಲೆ, ಮೂಗುಬೊಟ್ಟಿನ ಹೊರತಾಗಿ ಎಲ್ಲ ಒಡವೆಗಳನ್ನು ಮಹಾತ್ಮರ ಕೈಗೆ ನೀಡಿದಾಗ

**ಉತ್ತರ :** (D) ಗೌರಮ್ಮ ಸ್ವಾತಂತ್ರ್ಯ ಮತ್ತು ಹರಿಜನೋದ್ಧಾರ ನಿಧಿಗೆ ಮಂಗಳ ಸೂತ್ರ, ಓಲೆ, ಮೂಗುಬೊಟ್ಟಿನ ಹೊರತಾಗಿ ಎಲ್ಲ ಒಡವೆಗಳನ್ನು ಮಹಾತ್ಮರ ಕೈಗೆ ನೀಡಿದಾಗ

**85) ಕೊಡಗಿನ ಗೌರಮ್ಮನವರು ಬರೆದ ಮೊದಲ ಕತೆಯ ಹೆಸರು**

A) ಪುನರ್ವಿವಾಹ B) ಮೆರವಣಿಗೆ

C) ಬೆಂಕಿಬೇರು D) ನೆಲದ ನೆರಳು

**ಉತ್ತರ :** (A) ಪುನರ್ವಿವಾಹ

**86) ಶಿಶುನಾಳ ಶರೀಫರ ಮೊದಲಿನ ಹೆಸರು**

A) ಮೊಹಮ್ಮದ್ ಶರೀಫ B) ಅಬ್ದುಲ್ ಶರೀಫ

C) ಅಲ್ತಾಬ್ D) ಹಜರತ ಇಮಾಮ

**ಉತ್ತರ :** (A) ಮೊಹಮ್ಮದ್ ಶರೀಫ

**87) ಶರೀಫರಿಗೆ ಸಹಿಸಲಾಗದ ಆಘಾತವಾದದ್ದು ಈ ಕಾರಣದಿಂದ**

A) ಒಳ್ಳೆಯ ಗುರು ದೊರೆತಿರುವುದರಿಂದ

B) ಮನೆಯಲ್ಲಿ ಬಡತನವಿರುವುದರಿಂದ

C) ಮಗಳ ಮತ್ತು ಹೆಂಡತಿಯ ಮರಣದಿಂದ

D) ಹೃದಯ ಸಂಬಂಧಿ ಕಾಯಿಲೆ ಇರುವುದರಿಂದ

**ಉತ್ತರ :** (C) ಮಗಳ ಮತ್ತು ಹೆಂಡತಿಯ ಮರಣದಿಂದ

**88) ಶರೀಫರ ಆದರ್ಶ ಗುರು**

A) ಖಾದರ್ ಷಾ B) ಗುರುಗೋವಿಂದ ಭಟ್ಟ

C) ಹಜರತ ಇಮಾಮ ಸಾಹೇಬ D) ಹಾಜುಮ್

**ಉತ್ತರ :** (B) ಗುರುಗೋವಿಂದ ಭಟ್ಟ

**89) ಮೋಹನಪುರದ ಚಳುವಳಿಯನ್ನು ಮುನ್ನಡೆಸಿದ ಉತ್ಸಾಹೀ ತರುಣ**

A) ಸೋಮಣ್ಣ B) ಕುಲಕರ್ಣಿ

C) ತೇನ್‌ಸಿಂಗ್ D) ರಾಮಸಿಂಗ್

**ಉತ್ತರ :** (D) ರಾಮಸಿಂಗ್

**90) ಪ್ರೊ।। ಎಸ್. ಆರ್. ರೋಹಿಡೇಕರ್ ಅವರ ಕಾವ್ಯನಾಮ**

A) ರೋಹಿಡೆ ಶಾಮ್

B) ಶಾಮ್ ರೋಹಿಡೆ

C) ಎಸ್. ಆರ್. ರೋಹಿಡೆ

D) ರೋಹಿಡೇಕರ್ ಎಸ್. ಆರ್.

**ಉತ್ತರ :** (B) ಶಾಮ್ ರೋಹಿಡೆ

**91) ಧ್ವಜ ರಕ್ಷಣೆ ಪಾಠದಲ್ಲಿ ನಮಗೆ ಕಂಡು ಬರುವ ಶ್ಲಾಘನೀಯ ಗುಣ**

A) ಕುಲಕರ್ಣಿಯ ದರ್ಪ

B) ಮೋಹನಪುರದ ಜನರ ಜಯಕಾರ

C) ರಾಮಸಿಂಗನ ಕೆಚ್ಚು ಮತ್ತು ತುಳಜಾಬಾಯಿಯ ತ್ಯಾಗ

D) ಸೋಮಣ್ಣನಿಗೆ ರಾಮಸಿಂಗನ ಮೇಲಿರುವ ಪ್ರೀತಿ ವಿಶ್ವಾಸ

**ಉತ್ತರ :** (C) ರಾಮಸಿಂಗನ ಕೆಚ್ಚು ಮತ್ತು ತುಳಜಾಬಾಯಿಯ ತ್ಯಾಗ

**92) ಕಿತ್ತೂರು ಚೆನ್ನಮ್ಮಳನ್ನು ಸೆರೆಮನೆಯಲ್ಲಿ ಸಂಧಿಸಲು ಬಂದ ವೀರ**

A) ಅಜಮತಾರ

B) ಸಂಗೊಳ್ಳಿ ರಾಯಣ್ಣ

C) ಔರಂಗಜೇಬ

D) ಶಿವಾಜಿ

**ಉತ್ತರ :** (B) ಸಂಗೊಳ್ಳಿ ರಾಯಣ್ಣ

**93) ಕೆಳದಿಯ ರಾಣಿ ಚೆನ್ನಮ್ಮಳೊಂದಿಗೆ ಸೆಣಸಾಡಲು ಬಂದ ಮುಘಲ್ ಸೇನೆ ಪಲಾಯನಗೈದುದು ಈ ಕಾರಣದಿಂದ**

A) ಬಯಲು ಸೀಮೆಯ ಬಿಸಿಲಿನ ತಾಪಕ್ಕೆ ಹೆದರಿ

B) ಮಲೆನಾಡಿನ ಮಳೆಗೆ ತತ್ತರಿಸಿ ಪ್ರಾಣ ಭೀತಿಯಿಂದ

C) ತನ್ನ ಸೈನಿಕರಲ್ಲಿ ಹಲವರು ಮರಣ ಹೊಂದಿರುವುದರಿಂದ

D) ಸಾಂಕ್ರಾಮಿಕ ರೋಗಗಳು ಹರಡುತ್ತಿರುವುದರಿಂದ

**ಉತ್ತರ :** (B) ಮಲೆನಾಡಿನ ಮಳೆಗೆ ತತ್ತರಿಸಿ ಪ್ರಾಣ ಭೀತಿಯಿಂದ

**94) ಸಂನ್ಯಾಸಿ ವೇಷ ಧರಿಸಿದ ಮಲ್ಲಮ್ಮಾಜಿಯ ಸರದಾರ**

A) ಪಿತ್ರೋ

B) ರಾಜಾರಾಮ

C) ಶಾಂತಯ್ಯ

D) ಶಿವಾಜಿ

**ಉತ್ತರ :** (C) ಶಾಂತಯ್ಯ

## ತೃತೀಯ ಭಾಷೆ ಕನ್ನಡ

**95) ಜಾತಿ ಇಲ್ಲದ ಭೀತಿ ಇಲ್ಲದ________**

A) ಮುಳ್ಳು ತುಳಿಯತೇವ B) ಕನಸು ಕಟ್ಟತೇವ

C) ಹಾಡ ಕಟ್ಟತೇವ D) ಬಾಳ ಕಟ್ಟತೇವ

**ಉತ್ತರ :** (D) ಬಾಳ ಕಟ್ಟತೇವ

**96) ಕ್ರಾಂತಿಕಾರಿಗಳ ಕಾಲುಗಳು ರಕ್ತವಾಗಲು ಕಾರಣ**

A) ಕ್ರಾಂತಿ ಕೆಂಡದ ಕುಂಡ ಹೊತ್ತು ಮುಳ್ಳು ತುಳಿಯುವುದರಿಂದ

B) ವೈರಿಗಳು ಬಂದೂಕಿನಿಂದ ಹೊಡೆದಿರುವುದರಿಂದ

C) ಕ್ರಾಂತಿಕಾರಿಗಳು ಬೆಟ್ಟ–ಗುಡ್ಡಗಳಲ್ಲಿ ಓಡಾಡಿರುವುದರಿಂದ

D) ಕ್ರಾಂತಿಕಾರಿಗಳ ಕಾಲುಗಳಿಗೆ ಮೊದಲೇ ಏಟು ಬಿದ್ದಿರುವುದರಿಂದ

**ಉತ್ತರ :** (A) ಕ್ರಾಂತಿ ಕೆಂಡದ ಕುಂಡ ಹೊತ್ತು ಮುಳ್ಳು ತುಳಿಯುವುದರಿಂದ

**97) 'ಕಟ್ಟತೇವ ನಾವು' ಪದ್ಯದ ಆಶಯ**

A) ತಾರತಮ್ಯದಿಂದ ಕೂಡಿದ ಸಮಾಜ ನಿರ್ಮಾಣ ಮಾಡುವುದು

B) ಸಾಮಾಜಿಕ ಅಸಮಾನತೆ ಹೋಗಲಾಡಿಸಿ ತಾರತಮ್ಯಗಳಿಲ್ಲದ ಸಮಾಜ ನಿರ್ಮಾಣ ಮಾಡುವುದು

C) ದ್ವೇಷದಿಂದ ಕೂಡಿದ ಸಮಾಜ ನಿರ್ಮಾಣ ಮಾಡುವುದು

D) ದಬ್ಬಾಳಿಕೆಯಿಂದ ಕೂಡಿದ ಸಮಾಜ ನಿರ್ಮಾಣ ಮಾಡುವುದು

**ಉತ್ತರ :** (B) ಸಾಮಾಜಿಕ ಅಸಮಾನತೆ ಹೋಗಲಾಡಿಸಿ ತಾರತಮ್ಯಗಳಿಲ್ಲದ ಸಮಾಜ ನಿರ್ಮಾಣ ಮಾಡುವುದು

**98) ನಿತ್ಯೋತ್ಸದ ಕವಿ ಎಂದೇ ಪ್ರಸಿದ್ಧರಾದ ಕವಿ**

A) ದ. ರಾ. ಬೇಂದ್ರೆ

B) ಕುವೆಂಪು

C) ಸತೀಶ ಕುಲಕರ್ಣಿ

D) ಕೆ. ಎಸ್. ನಿಸಾರ್ ಅಹಮದ್.

**ಉತ್ತರ :** (D) ಕೆ. ಎಸ್. ನಿಸಾರ್ ಅಹಮದ್.

**99) ರಸ ಕವಿತ್ವ ಒಂದೇ ಆದರೂ ಅದರ ರಚನೆಗೆ ಬಳಕೆಯಾಗುತ್ತಿರುವ ಛಂದೋ ಪ್ರಕಾರಗಳು ಇವು**

A) ಉಪಮಾ, ರೂಪಕ, ಉತ್ಪ್ರೇಕ್ಷಾ, ದೃಷ್ಟಾಂತ

B) ಕಂದ, ವೃತ್ತ, ತ್ರಿಪದಿ, ವಚನ

C) ಗುಣ, ಸವರ್ಣದೀರ್ಘ, ಯಣ್, ವೃದ್ಧಿ

D) ಕರ್ಮಧಾರೆಯ, ತತ್ಪುರುಷ, ದ್ವಂದ್ವ, ದ್ವಿಗು

**ಉತ್ತರ :** (B) ಕಂದ, ವೃತ್ತ, ತ್ರಿಪದಿ, ವಚನ

**100) 'ಕಳಸ' ಈ ಧರ್ಮದ ಸಂಕೇತವಾಗಿದೆ**

A) ಹಿಂದೂ B) ಬೌದ್ಧ

C) ಕ್ರೈಸ್ತ D) ಮುಸಲ್ಮಾನ

**ಉತ್ತರ :** (A) ಹಿಂದೂ

**101) ಬಸವಣ್ಣನವರ ವಚನಗಳಲ್ಲಿ ಹೇಳಿರುವಂತೆ ಮಿಥ್ಯವ ನುಡಿವುದೇ**

A) ದೇವಲೋಕ B) ಮರ್ತ್ಯಲೋಕ

C) ಯಮಲೋಕ D) ಪಾತಾಳಲೋಕ

**ಉತ್ತರ :** (B) ಮರ್ತ್ಯಲೋಕ

**102) ಬಸವಣ್ಣನವರ ಪ್ರಕಾರ ಕೂಡಲ ಸಂಗಮದೇವನನ್ನು ಒಲಿಸುವ ಪರಿ**

A) ಅಂತರಂಗ ಮತ್ತು ಬಹಿರಂಗ ಶುದ್ಧಿಯಿಂದ

B) ಪ್ರತಿನಿತ್ಯವೂ ದೇವರ ಪೂಜೆ ಮಾಡುವುದರಿಂದ

C) ನಿತ್ಯವೂ ಜಪ–ತಪಗಳನ್ನು ಮಾಡುವುದರಿಂದ

D) ಡಾಂಭಿಕ ಭಕ್ತಿಯ ಪ್ರದರ್ಶನದಿಂದ

**ಉತ್ತರ :** (A) ಅಂತರಂಗ ಮತ್ತು ಬಹಿರಂಗ ಶುದ್ಧಿಯಿಂದ

**103) ಬಸವಣ್ಣನವರ ವಚನಗಳಲ್ಲಿ ಕಂಡು ಬರುವ ನಾವು ಮೆಚ್ಚಬಹುದಾದ ಮಾನವೀಯ ಮೌಲ್ಯಗಳು**

A) ಸಾಮಾಜಿಕ ಪ್ರಜ್ಞೆಯನ್ನು ಬೆಳೆಸುವುದು

B) ಆಚಾರ, ಸತ್ಯ, ಅಹಿಂಸೆಯ ಗುಣವನ್ನು ಎತ್ತಿ ಹಿಡಿದಿರುವುದು.

C) ಎಲ್ಲ ಮಾನವರು ಸಹೋದರತೆಯಿಂದ ಬಾಳ್ವೆ ನಡೆಸುವುದು

D) ತಾರತಮ್ಯಗಳಿಂದ ಕೂಡಿದ ಸಮಾಜ ನಿರ್ಮಾಣ ಮಾಡುವುದು

**ಉತ್ತರ :** (B) ಆಚಾರ, ಸತ್ಯ, ಅಹಿಂಸೆಯ ಗುಣವನ್ನು ಎತ್ತಿ ಹಿಡಿದಿರುವುದು.

**104) ಪುರಂದರದಾಸರ ಅಂಕಿತ**

A) ರಂಗವಿಠಲ B) ಗೋಪಾಲವಿಠಲ

C) ಪುರಂದರವಿಠಲ D) ಕಾಗಿನೆಲೆ ಆದಿಕೇಶವ

**ಉತ್ತರ :** (C) ಪುರಂದರವಿಠಲ

**105) ಪುರಂದರದಾಸರು ಡಾಂಭಿಕ ಭಕ್ತನ ದೇವರ ಕೋಣೆಗೆ ಕೊಟ್ಟ ಹೋಲಿಕೆ**

A) ಭಿಕ್ಷುಕನ ಬಿಡಾರ B) ಕಂಚುಗಾರನ ಬಿಡಾರ

C) ನಾಟಕ ಸ್ತ್ರೀ D) ಸುಂದರವಾದ ಹೂದೋಟ

**ಉತ್ತರ :** (B) ಕಂಚುಗಾರನ ಬಿಡಾರ

**106) ಡಾಂಭಿಕ ಭಕ್ತನು ಇವರ ಗುಣವನ್ನು ಮನದಲ್ಲಿ ಸ್ಮರಿಸುವನು**

A) ಪರಸತಿಯರ B) ಗುರುಗಳ

C) ಪರಪತಿಯರ D) ತಂದೆ–ತಾಯಿಯರ

**ಉತ್ತರ :** (A) ಪರಸತಿಯರ

**107) ಶಿಲ್ಪಿ ಧರ್ಮಪದನು ವಿಶುವಿನ ಹತ್ತಿರಕ್ಕೆ ಬರಲು ಕಾರಣ**

A) ಕೋನಾರ್ಕ ದೇವಾಲಯದ ಪೂಜೆಗೈಯಲು

B) ತನ್ನ ತಂದೆಯನ್ನು ಪರೀಕ್ಷಿಸಲು

C) ಕೋನಾರ್ಕ ದೇವಾಲಯದ ಮಹಾದ್ವಾರಕ್ಕೆ ಕಲಶ ಕೂಡಿಸಲು

D) ಕೋನಾರ್ಕ ದೇವಾಲಯವನ್ನು ಕೆಡವಲು

**ಉತ್ತರ :** (C) ಕೋನಾರ್ಕ ದೇವಾಲಯದ ಮಹಾದ್ವಾರಕ್ಕೆ ಕಲಶ ಕೂಡಿಸಲು

**108) ಕೆರೆಗಳು ತುಂಬಿ ಬರುವ ಮಳೆ**

A) ಸ್ವಾತಿ B) ರೋಹಿಣಿ

C) ಆರಿದ್ರಾ D) ಮೃಗಶಿರಾ

**ಉತ್ತರ :** (A) ಸ್ವಾತಿ

**109) ರೈತನಿಗೆ ಮೋಡಗಳು ಕಂಡು ಬಂದದ್ದು ಹೀಗೆ**

A) ಗೋಡೆಗೆ ಸುಣ್ಣ ಬಳಿದಂತೆ

B) ಗೋಡೆಗೆ ಹಸಿರು ಬಳಿದಂತೆ

C) ಗೋಡೆಗೆ ಬಣ್ಣವೇ ಬಳಿಯದ ಹಾಗೆ

D) ಗೋಡೆಗೆ ಕಪ್ಪು ಬಳಿದಂತೆ

**ಉತ್ತರ :** (D) ಗೋಡೆಗೆ ಕಪ್ಪು ಬಳಿದಂತೆ

**110) ಮಗನ ಕುರಿತು ವಿಶುವಿನ ಎದೆಯಲ್ಲಿ ಎಂದೆಂದಿಗೂ ನಿಲ್ಲದಂತೆ ಮೊಳಗುತ್ತಿದ್ದ ಪದ**

A) ಮಹಾಶಿಲ್ಪಿ B) ಮಹಾಜ್ಞಾನಿ

C) ಮಹಾಕವಿ D) ಮಹಾವೀರ

**ಉತ್ತರ :** (A) ಮಹಾಶಿಲ್ಪಿ

**111) ಕವಿ ಪದದ ಅನ್ಯಲಿಂಗ ರೂಪ**

A) ಕವಿಯಿತ್ರಿ B) ಕವಯಿತ್ರಿ

C) ಕವಿಯತ್ರಿ D) ಕವಿತ್ರಿ

**ಉತ್ತರ :** (B) ಕವಯಿತ್ರಿ

**112) ಒಂದು ಅಥವಾ ಅನೇಕ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದರೆ ಆ ವಾಕ್ಯವು**

A) ಸಾಮಾನ್ಯ ವಾಕ್ಯ B) ಸಂಯೋಜಿತ ವಾಕ್ಯ

C) ಮಿಶ್ರವಾಕ್ಯ D) ಪ್ರಶ್ನಾರ್ಥಕ ವಾಕ್ಯ

**ಉತ್ತರ :** (C) ಮಿಶ್ರವಾಕ್ಯ

**113) ಕನ್ನಡ ವರ್ಣಮಾಲೆಯಲ್ಲಿರುವ ವರ್ಗೀಯ ವ್ಯಂಜನಗಳ ಸಂಖ್ಯೆ**

A) ಹದಿಮೂರು B) ಇಪ್ಪತ್ತೈದು

C) ಮೂವತ್ತಾನ್ಲುಕ್ಕು D) ಐದು

**ಉತ್ತರ :** (B) ಇಪ್ಪತ್ತೈದು

**114) ಧಗಧಗ ಪದವು**

A) ಅನುಕರಣಾವ್ಯಯ B) ದ್ವಿರುಕ್ತಿ

C) ಜೋಡುನುಡಿ D) ನುಡಿಗಟ್ಟು

**ಉತ್ತರ :** (A) ಅನುಕರಣಾವ್ಯಯ

**115) ಪ್ರತಿ ವರ್ಷವೂ ದಸರಾದಲ್ಲಿ, ಮೈಸೂರಿನ ಅರಮನೆಯಲ್ಲಿ ವಿಶೇಷವಾದ ದೀಪಾಲಂಕಾರವನ್ನು ಮಾಡುತ್ತಾರೆ. ಗೆರೆ ಎಳೆದ ಪದವು**

A) ಕರ್ಮಧಾರೆಯ ಸಮಾಸ  B) ತತ್ಪುರುಷ ಸಮಾಸ

C) ದ್ವಿಗು ಸಮಾಸ  D) ಅಂಶೀ ಸಮಾಸ

**ಉತ್ತರ :** (B) ತತ್ಪುರುಷ ಸಮಾಸ

**116) ಪ್ರಶಾಂತನು ಪುಸ್ತಕವನ್ನು ತರಲು ನಗರಕ್ಕೆ ಹೋದನು. ಈ ವಾಕ್ಯದಲ್ಲಿ ಚತುರ್ಥೀ ವಿಭಕ್ತಿ ಪ್ರತ್ಯಯದಿಂದ ಕೂಡಿದ ಪದ**

A) ಪುಸ್ತಕವನ್ನು  B) ನಗರಕ್ಕೆ

C) ಹೋದನು  D) ಪ್ರಶಾಂತನು

**ಉತ್ತರ :** (B) ನಗರಕ್ಕೆ

**117) ಕೆಳಗಿನ ಪದಗಳಲ್ಲಿ ಗುಣಸಂಧಿಗೆ ಉದಾಹರಣೆ**

A) ಏಕೈಕ  B) ಗತ್ಯಂತರ

C) ಜೀವನೋತ್ಸಾಹ  D) ದೀಪಾಲಂಕಾರ

**ಉತ್ತರ :** (C) ಜೀವನೋತ್ಸಾಹ

**118) ಪ್ರಸಾದ ಪದದ ತದ್ಭವ ರೂಪ**

A) ಬೇಸಾಯ  B) ಹಸಾದ

C) ಜನುಮ  D) ಮೊಗ

**ಉತ್ತರ :** (B) ಹಸಾದ

**119) ಅಭಿಪ್ರಾಯದ ವಿವರಣೆ ಇಂತಿದೆ ಎನ್ನುವುದನ್ನು ತಿಳಿಸುವ ಸಂದರ್ಭದಲ್ಲಿ ಬಳಸುವ ಲೇಖನ ಚಿಹ್ನೆ**

A) ವಿವರಣಾತ್ಮಕ ಚಿಹ್ನೆ  B) ಭಾವಸೂಚಕ ಚಿಹ್ನೆ

C) ಉದ್ಧರಣ ಚಿಹ್ನೆ  D) ಆವರಣ ಚಿಹ್ನೆ

**ಉತ್ತರ :** (A) ವಿವರಣಾತ್ಮಕ ಚಿಹ್ನೆ

**120) ಗುರುಗಳಿಗೆ ಪತ್ರ ಬರೆಯುವಾಗ ಪತ್ರದಲ್ಲಿ ಆರಂಭದ ಸಂಬೋಧನೆ ಹೀಗಿರಬೇಕು**

A) ಮಾನ್ಯರೇ  B) ಪೂಜ್ಯ ಗುರುಗಳೇ

C) ತೀರ್ಥರೂಪ  D) ಪ್ರೀತಿಯ ಗೆಳೆಯನಿಗೆ

**ಉತ್ತರ :** (B) ಪೂಜ್ಯ ಗುರುಗಳೇ